ಸರ್ಕಾರ ಹೊಸದಾಗಿ, ಈ ಕೆಳಗಿನ ಸ್ಥಳಗಳಲ್ಲಿ ಪ್ರವಾಸಿ ಸೌಲಭ್ಯ ಒದಗಿಸಲು ಕ್ರಮ ಕೈಗೊಂಡಿದೆ,

೧) ಮೂಡಬಿದ್ರೆ ಮತ್ತು ಕಾರ್ಕಳದಲ್ಲಿ ಈಗಿರುವ ಪ್ರವಾಸಿ ಕುಟೀರಗಳ ಜೊತೆಗೆ ಉಪಹಾರ ಗೃಹ ಹಾಗೂ ಊಟದ ಕೊಠಡಿ ಸೌಲಭ್ಯ.

೨) ತಲಕಾಡು, ಮದ್ದೂರು, ಮುಳಬಾಗಿಲು, ಹುಮನಬಾದ್, ಮಾಚೇನಹಳ್ಳಿ (ಗುಂಡ್ಲು ಪೇಟೆ) ರಾಮನಗರಂ (ಸೂಪಾ) ಕೋಲಾರ ಮತ್ತು ಆಗುಂಬೆಯಲ್ಲಿ ಹೆದ್ದಾರಿ ಸೌಲಭ್ಯಗಳನ್ನು ಒದಗಿಸುವುದು.

೩) ಜೋಗ್ ಜಲಪಾತ, ಶ್ರೀರಂಗಪಟ್ಟಣ, ಶೃಂಗೇರಿ, ದತ್ತಾತ್ರೇಯ ಪೀಠ, ಸೌಂದತ್ತಿ ಗಳಲ್ಲಿ ಉಪಹಾರ ಗೃಹ ಮತ್ತು ಶೌಚಾಲಯ ಸೌಲಭ್ಯ.

೪) ಮುತ್ಯಾಲಮಡುವಿನಲ್ಲಿ ಪಿಕ್‌ನಿಕ್ ಮನೋರಂಜನಾ ಸೌಲಭ್ಯ.

೫) ಬೇಂದ್ರೆ ತೀರ್ಥದಲ್ಲಿ ಶೌಚಾಲಯ ಮತ್ತು ಉಡುಪುಗಳನ್ನು ಬದಲಾಯಿಸುವ ಕೊಠಡಿಗಳು

೬) ಮೇಕೆದಾಟು, ಬಾದಾಮಿಗಳಲ್ಲಿ ಹೆಚ್ಚುವರಿ ಸೌಲಭ್ಯ.

೭) ಸೋಗಲದಲ್ಲಿ (ಬೈಲು ಹೊಂಗಲ) ಶೀಘ್ರ ಊಟದ ವ್ಯವಸ್ಥೆಯ ಸೌಲಭ್ಯ (ಫಾಸ್ಟ್ ಫುಡ್ ಸರ್ವೀಸ್ ಕೌಂಟರ್)

೮) ಬೇಲೂರಿನಲ್ಲಿ ೨೫ ಕೊಠಡಿಗಳ ನಿರ್ಮಾಣ ಹಾಗೂ ೨ ಸಮುದಾಯ ಕೊಠಡಿಗಳು(ಡಾರ್ಮೆಟರಿಸ್) ಸೌಲಭ್ಯ

ಬೈಲಹೊಂಗಲ ಬಸ್ ಸ್ಟ್ಯಾಂಡ್ ಸುಧಾರಣೆ ಬಗ್ಗೆ

೭೬೭. ಶ್ರೀ ಶಿವಾನಂದ ಹೆಚ್. ಕೌಜಲಗಿ(ಬೈಲಹೊಂಗಲ).—ಮಾನ್ಯ ಸಾರಿಗೆ,ಸಣ ಉಳಿತಾಯ ಮತ್ತು ಬಂಧೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾವಿ ಜಿಲ್ಲೆಯ ಬೈಲಹೊಂಗಲದ ಬಸ್ ನಿಲ್ದಾಣದಲ್ಲಿ ಡಾಂಬರು ಮಾಡುವುದು, ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ವೀರಣ್ಣ(ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಮಂತ್ರಿಗಳು).—

ಅ) ಬಂದಿದೆ.

ಆ) ಬಸ್ ನಿಲ್ದಾಣದ ಆವರಣಕ್ಕೆ ೧೯೮೭-೮೮ನೇ ಸಾಲಿನಲ್ಲಿ ಡಾಂಬರು ಹಾಕಲಾಗುವುದು.

ದೊಡವಾಡ ಗ್ರಾಮದಲ್ಲಿ ಬಸ್ ಸ್ಟ್ಯಾಂಡ್ ಕಟ್ಟುವ ಬಗ್ಗೆ

೭೪೭. ಶ್ರೀ ಶಿವಾನಂದ, ಹೆಚ್. ಕೌಜಲಗಿ (ಬೈಲಹೊಂಗಲ) ಮಾನ್ಯ ಸಾರಿಗೆ ಸಣ್ಣ ಉಳಿತಾಯ ಮಂತ್ತು ಬಂಧೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ದೊಡವಾಡ ಗ್ರಾಮದಲ್ಲಿ ಬಸ್ಸು ನಿಲ್ದಾಣದ ಅವಶ್ಯಕತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಅದನ್ನು ಕಟ್ಟಲು ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು ?

ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮಂತ್ತು ಬಂಧೀಖಾನೆ ರಾಜ್ಯ ಮಂತ್ರಿಗಳು).—

ಅ) ತಂಗು ನಿಲ್ದಾಣದ ಅವಶ್ಯಕತೆಯಿದೆ,

ಆ) ಸೂಕ್ತವಾದ ನಿವೇಶನ ದೊರೆತಿದ ನಂತರ ತಂಗುದಿ ನಿಲ್ದಾಣವನ್ನು ನಿರ್ಮಿಸಲು ಕ್ರಮವನ್ನು ತೆಗೆದುಕೊಳ್ಳಲಾಗುವುದು.